ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 06.01.2015

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ.

ಈ ವಾರದ ಮುನ್ಸೂಚನೆ (ದಿನಾಂಕ 07.01.15 –11.01.15 ವರೆಗೆ)

	07.01.15	08.01.15	09.01.15	10.01.15	11.01.15
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	28	29	29	28	28
ಕನಿಷ್ಠ ಉಷ್ಣಾಂಶ (ಡಿ.ಸೆ.)	16	16	16	16	17
ಮೋಡ (ಪ್ರಮಾಣ)	1	1	2	3	1
ಅರ್ದ್ರತೆ ೭.೨೦ ಬೆ (ಶೇ)	88	83	88	93	87
ಅರ್ದ್ರತೆ ೨.೨೦ ಮ (ಶೇ)	44	41	41	42	47
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	5	4	4	5
ಗಾಳಿಯ ದಿಕ್ಕು (ಡಿಗ್ರಿ)	95	125	120	100	90

ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳಲ್ಲಿ ತುಂತುರು ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **28.0-29.0°C** ಮತ್ತು ಕನಿಷ್ಠ ಉಷ್ಣಾಂಶ **17.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **80-92 %** ಇದ್ದು, ಮಧ್ಯಾಹ್ನ **40-51 %** ಇರುವ ಸಾದ್ಯತೆ ಇದೆ ಮತ್ತು ಗಾಳಿಯು ಗಂಟೆಗೆ ಸರಾಸರಿ **4-6** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಜನವರಿ ತಿಂಗಳಲ್ಲಿ ಬೆಳೆಯಬಹುದಾದ ಬೆಳೆ ಹಾಗು ತಳಿಗಳು :

  ಸೂರ್ಯಕಾಂತಿ : ಮಾರ್ಡೆನ್, ಕೆ.ಬಿ.ಎಸ್.ಹೆಚ್-1,41,42 ಮತ್ತು 44

  ಶೇಂಗಾ : ಐ.ಸಿ.ಜಿ.ಎಸ್-11, ಕೆ-134, ಮತ್ತು ಚಿಂತಾಮಣಿ-2 (ಕೆ.ಸಿ.ಎಚ್-2)

  ಮುಸುಕಿನ ಜೋಳ : ಗಂಗಾ-೧೧, ಡೆಕ್ಕನ್-೧೦೩, ಎನ್.ಎ.ಸಿ-6002 ಮತ್ತು 6004, ನಿತ್ಯಶ್ರೀ

  ರಾಗಿ : ಇನ್ದಾಫ್-5, ಜಿ.ಪಿ.ಯು-26 ಮತ್ತು 28
- **ರಾಗಿ:** ಬೆಳೆಗಳ ಕಟಾವನ್ನು ಮುಂದುವರಿಸಲು ಸೂಚಿಸಲಾಗಿದೆ ಅಥವಾ ಕಟಾವು ಕುಯಂತ್ರೊಪಕರಣಗಳನ್ನು ಬಳಸಿ ಕಟಾವನ್ನು ಮಾಡಲು ಸೂಚಿಸಲಾಗಿದೆ. ಒಕ್ಕಣೆ ಮತ್ತು ತೂರುವುದನ್ನು ಯಂತ್ರೋಪಕರಣಗಳನ್ನು ಬಳಸಿ ಸ್ವಚ್ಚವಾದ ಬೆಳೆಗಳನ್ನು ಗೋಣಿ ಚೀಲಗಳಲ್ಲಿ ಶೇಖರಿಸಲು ಸೂಚಿಸಲಾಗಿದೆ.
- **ಮಾವು:** ವಾತಾವರಣದಲ್ಲಿ ಬೆಳಗಿನ ಸಮಯದಲ್ಲಿ ಕಡಿಮೆ ಉಷ್ಣಾಂಶ ಮತ್ತು ಹೆಚ್ಚಿನ ಆರ್ದ್ರತೆ ಇರುವುದರಿಂದ ಹೊ ಬಿಡುವ ಹಂತದಲ್ಲಿ ಬೂದಿರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ ಕಾರ್ಬರಿಲ್ ೪.೦ ಗ್ರಾಂ. ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸುವುದು.

  ಜಿಗಿ ಹುಳು ಕೀಟದ ನಿಯಂತ್ರಣಕ್ಕೆ ಕಾನ್ಫೀಡಾರ್ (Confidor) 0.5 ಮಿ.ಲಿ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸುವುದು.

ನೋಡಲ್ ಅಧಿಕಾರಿ
ಕೃಷಿ ವಿಶ್ವ ವಿದ್ಯಾನಿಲಯ
ಬೆಂಗಳೂರು.